# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 131 |
| 2. | ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪೂರ್ |
| 3. | ಉತ್ತರಿಸುವ ದಿನಾಂಕ | : | 05/03/2025 |
| 4. | ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಭವನಗಳು ಯಾವ ಯಾವ ಸ್ಥಳದಲ್ಲಿ ಇವೆ ಹಾಗೂ ನೂತನವಾಗಿ ನಿರ್ಮಿಸುವ ಚಿಂತನೆ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ, ಯಾವ ಸ್ಥಳಗಳಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ನಾಲ್ಕು ಕರ್ನಾಟಕ ಭವನ ಕಟ್ಟಡಗಳು ನವದೆಹಲಿಯಲ್ಲಿರುತ್ತವೆ.<br>• ನವದೆಹಲಿ ಚಾಣಕ್ಯಪುರಿಯ ಕೌಟಿಲ್ಯ ಮಾರ್ಗದಲ್ಲಿ-<br>1. ಕರ್ನಾಟಕ ಭವನ-1 (ಕಾವೇರಿ)<br>2. ಕರ್ನಾಟಕ ಭವನ (ಅನೆಕ್ಸ್)<br>• ನವದೆಹಲಿ ಚಾಣಕ್ಯಪುರಿಯಲ್ಲಿ ಸರ್ದಾರ್ ಪಟೇಲ್ ಮಾರ್ಗದಲ್ಲಿ-<br>3. ಕರ್ನಾಟಕ ಭವನ-2 (ಶರಾವತಿ)<br>• ನವದೆಹಲಿ ಹುಡ್ಕೋಪ್ಲೇಸ್ ಅನಸಲ್ ಪ್ಲಾಜ್‌ದಲ್ಲಿ-<br>4. ಕರ್ನಾಟಕ ಭವನ-3 (ಭೀಮಾ)<br>• **ಸದರಿ ನಾಲ್ಕು ಕರ್ನಾಟಕ ಭವನ ಕಟ್ಟಡಗಳ ವಿವರಗಳು ಕೆಳಕಂಡಂತಿದೆ.**<br>• **ಕರ್ನಾಟಕ ಭವನ -1 (ಕಾವೇರಿ)** ಕಟ್ಟಡವನ್ನು ಕೆಡವಿ ಸದರಿ ಸ್ಥಳದಲ್ಲಿ ನೂತನ ಕಟ್ಟಡವನ್ನು ನಿರ್ಮಿಸಿದ್ದು, ಸದರಿ ಕಟ್ಟಡವು ಸಂಪೂರ್ಣಗೊಂಡು ಉದ್ಘಾಟನೆಗೆ ಸಿದ್ಧಗೊಂಡಿರುತ್ತದೆ.<br>• ಹೊಸ ಕಟ್ಟಡದಲ್ಲಿ ಎರಡು ವಿವಿಐಪಿ ಕೊಠಡಿಗಳನ್ನು ಹೊಂದಿಕೊಂಡಂತೆ ಒಟ್ಟು 52 ಕೊಠಡಿಗಳು ಇರುತ್ತವೆ.<br>• ಕರ್ನಾಟಕ ಭವನ -1 (ಕಾವೇರಿ) ಕಟ್ಟಡಕ್ಕೆ ಹೊಂದಿಕೊಂಡಂತೆ **ಕರ್ನಾಟಕ ಭವನ (ಅನೆಕ್ಸ್) ಕಟ್ಟಡ** ಇರುತ್ತದೆ.<br>• ಹೊಸ ಕಟ್ಟಡದಲ್ಲಿ ಎರಡು ವಿವಿಐಪಿ ಕೊಠಡಿಗಳನ್ನು ಹೊಂದಿಕೊಂಡಂತೆ ಒಟ್ಟು 37 ಕೊಠಡಿಗಳು ಇರುತ್ತವೆ.<br>• **ಕರ್ನಾಟಕ ಭವನ -2 (ಶರಾವತಿ)** ಸದರಿ ಕಟ್ಟಡವು ಒಟ್ಟು 36 ಕೊಠಡಿಗಳನ್ನು ಹೊಂದಿರುತ್ತದೆ.<br>• **ಕರ್ನಾಟಕ ಭವನ -3 (ಭೀಮಾ)** ಸದರಿ ಕಟ್ಟಡವನ್ನು ಹುಡ್ಕೊರವರಿಂದ 99 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಪಡೆದು ನಡೆಸಲಾಗುತ್ತಿರುತ್ತದೆ,<br>• ಕಟ್ಟಡವು 5 ವಿಐಪಿ ಕೊಠಡಿಗಳನ್ನೊಳಗೊಂಡಂತೆ ಒಟ್ಟು 36 ಕೊಠಡಿಗಳನ್ನು ಹೊಂದಿರುತ್ತದೆ.<br><br>• ನೂತನವಾಗಿ ಕರ್ನಾಟಕ ಭವನಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

ಆ) ಸರ್ಕಾರದಿಂದ ಕಳೆದ 5 ವರ್ಷದಿಂದ ಈ ಭವನಗಳಿಗೆ ಬಿಡುಗಡೆಯಾದ ಹಣ ಎಷ್ಟು: ಎಷ್ಟು ಸಿಬ್ಬಂದಿಗಳು ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗೂ ಖಾಯಂ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು: ಈಗಾಗಲೇ ಅಸ್ತಿತ್ವದಲ್ಲಿರುವ ಕರ್ನಾಟಕ ಭವನಗಳನ್ನು ಸುವ್ಯವಸ್ಥೆಗೊಳಿಸಿ ಅಭಿವೃದ್ಧಿ ಮಾಡಲು ತಗಲುಬಹುದಾದ ಅಂದಾಜು ಮೊತ್ತ ಎಷ್ಟು? (ಭವನವಾರು ಮಾಹಿತಿ ನೀಡುವುದು)

ಸರ್ಕಾರದಿಂದ ಕಳೆದ 05 ವರ್ಷಗಳಲ್ಲಿ ಸದರಿ ಕರ್ನಾಟಕ ಭವನದ ಕಟ್ಟಡಗಳ ನಿರ್ವಹಣೆಗೆ ಲೋಕೋಪಯೋಗಿ ಇಲಾಖೆ ವತಿಯಿಂದ ಲೆಕ್ಕ ಶೀರ್ಷಿಕೆ:2059-80-053-4-00-200 ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ ವೆಚ್ಚ ಅಡಿಯಲ್ಲಿ ಹಾಗೂ 4059-80-051-0-29-386 ಇಲಾಖಾ ಕಟ್ಟಡಗಳ ಅಡಿಯಲ್ಲಿ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ.

| **ವರ್ಷ** | **ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)** | |
|---|---|---|
| | ಲೆಕ್ಕ ಶೀರ್ಷಿಕೆ: **2059** | ಲೆಕ್ಕ ಶೀರ್ಷಿಕೆ: **4059** |
| 2020-21 | 502.27 | 70.01 |
| 2021-22 | 305.13 | 1757.54 |
| 2022-23 | 96.19 | 2106.92 |
| 2023-24 | 211.34 | 2169.92 |
| 2024-25 | 89.85 | 793.74 |
| ಮೇಲೆ ಬಿಡುಗಡೆಯಾದ ಅನುದಾನದ ಅನುಸಾರ ವೆಚ್ಚವನ್ನು ಭರಿಸಲಾಗಿರುತ್ತದೆ. | | |

ನವದೆಹಲಿಯ ಕರ್ನಾಟಕ ಭವನ ಮತ್ತು ನಿವಾಸಿ ಆಯುಕ್ತರು ಇವರ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಅಧಿಕಾರಿ/ಸಿಬ್ಬಂದಿಗಳ ವಿವರ, ನಿಯೋಜನ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ, ಸಮಾಲೋಚಕರ, ಗುತ್ತಿಗೆ ಆಧಾರ/ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ನೌಕರರ ಸಿಬ್ಬಂದಿ ಸಂಖ್ಯಾವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈಗಾಗಲೇ ಅಸ್ತಿತ್ವದಲ್ಲಿರುವ ಕರ್ನಾಟಕ ಭವನಗಳನ್ನು ಸುವ್ಯವಸ್ಥಿತಗೊಳಿಸುವ ನವೀಕರಣ ಕಾಮಗಾರಿಯ ಅಂದಾಜು ಪಟ್ಟಿ ತಯಾರಿಕೆಯ ಹಂತದಲ್ಲಿದ್ದು, ಅಂದಾಜು ಪಟ್ಟಿ ಸಿದ್ಧಗೊಂಡ ನಂತರ ಮುಂದಿನ ಕ್ರಮ ವಹಿಸಲಾಗುವುದು.

ಸಂಖ್ಯೆ: ಲೋಇ 15 ಬಿಎಲ್ ಕ್ಯೂ 2025

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು.

**ಶ್ರೀ ಸುನೀಲ್ ವಲ್ಯಾಪೂರ್, ಮಾನ್ಯ ವಿಧಾನ ಪರಿಷತ್ತು ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:131ಕ್ಕೆ ಅನುಬಂಧ.**

ಕರ್ನಾಟಕ ಭವನ ಮತ್ತು ನಿವಾಸಿ ಆಯುಕ್ತರವರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳ ವಿವರಗಳು

**(ದಿನಾಂಕ:04.03.2025 ರಲ್ಲಿ ದ್ದಂತೆ)**

| ಕ್ರ. ಸಂ | ಹುದ್ದೆಗಳ ವಿವರಗಳು | ಸಂಖ್ಯೆ |
|---|---|---|
| 1 | ನವದೆಹಲಿಯ ಕರ್ನಾಟಕ ಭವನದಲ್ಲಿ ಖಾಯಂ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ಸಂಖ್ಯೆ | 94 |
| 2 | ನವದೆಹಲಿಯ ನಿವಾಸಿ ಆಯುಕ್ತರವರ ಕಛೇರಿಯಲ್ಲಿ ಖಾಯಂ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ಸಂಖ್ಯೆ | 24 |
| 3 | ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳ ಸಂಖ್ಯೆ<br>1) ಕರ್ನಾಟಕ ಭವನ, ನವದೆಹಲಿ - 01<br>2) ನಿವಾಸಿ ಆಯುಕ್ತರವರ ಕಛೇರಿ – 05<br>ಒಟ್ಟು - 06 | 06 |
| 4 | ಸಮಾಲೋಚಕರು<br>1) ಶ್ರೀ ಸುಭಾಷ್ಚಂದ್ರ ಸಾಗರ್ – ಸಮಾಲೋಚಕರು | 01 |
| 5 | ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ನೌಕರರು | -- |
| 6 | ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ನೌಕರರು (ಏಜೆನ್ಸಿಮೂಲಕ)<br>1) ಹೌಸ್ಕೀಪಿಂಗ್ - 64<br>2) ಭದ್ರತಾಸಿಬ್ಬಂದಿ – 12<br>3) ವಾಹನಚಾಲಕರು - 20<br>ಒಟ್ಟು - 96 | 96 |
| | ಒಟ್ಟು | 221 |